ಕಲಿಸುತ್ತಿದ್ದುದರಿಂದ, ಅವರ ಓದನ್ನು ಇಲ್ಲವೇ ಬರವಣಿಗೆಯನ್ನು ಮೇಲ್ಮಟ್ಟಕ್ಕೇರಿಸುವಲ್ಲಿ ಅವು ಯಾವ ನೆರವನ್ನೂ ಕೊಡುತ್ತಿರಲಿಲ್ಲ.

ವ್ಯಾಕರಣವನ್ನು ಒಂದು ವಿಷಯವಾಗಿ ಕಲಿಸುವ ಬದಲು, ಮಕ್ಕಳ ಓದಿಗೆ ಇಲ್ಲವೇ ಬರವಣಿಗೆಗೆ ನೇರವಾಗಿ ಸಂಬಂಧಿಸುವ ಹಾಗೆ ಕಲಿಸಿದೆವಾದರೆ, ಅಂತಹ ಕಲಿಕೆಯಲ್ಲಿ ಮಕ್ಕಳಿಗೆ ಕುತೂಹಲವುಂಟಾಗಬಲ್ಲುದು, ಮತ್ತು ಅದರಿಂದ ಮಕ್ಕಳ ಓದಿನಲ್ಲಿ ಮತ್ತು ಬರವಣಿಗೆಯಲ್ಲಿ ಮೇಲೇರಿಕೆಯೂ ಉಂಟಾಗಬಲ್ಲುದು. ಉದಾಹರಣೆಗೆ, ಕೆಲವು ವಾಕ್ಯಗಳ ಅರ್ಥವೇನೆಂಬುದನ್ನು ತಿಳಿದುಕೊಳ್ಳಲು ಮಕ್ಕಳಿಗೆ ತೊಂದರೆಯಾಗುತ್ತಿರಬಹುದು. ಆದರೆ, ಅಂತಹ ವಾಕ್ಯಗಳಲ್ಲಿ ಮುಖ್ಯವಾದ ಅಂಶಗಳಿಂದ ಮುಖ್ಯವಲ್ಲದ ಅಂಶಗಳನ್ನು ಬೇರ್ಪಡಿಸುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟಲ್ಲಿ, ಅವರು ಆ ವಾಕ್ಯಗಳ ಅರ್ಥವನ್ನು ಸುಲಭವಾಗಿ ತಿಳಿದುಕೊಳ್ಳಬಲ್ಲರು. ತುಂಬಾ ತೊಡಕು ತೊಡಕಾಗಿರುವ ವಾಕ್ಯದಲ್ಲೂ ಮುಖ್ಯ ಅಂಶಗಳನ್ನು ಉಳಿದ ಅಂಶಗಳಿಂದ ಬೇರ್ಪಡಿಸಿದಾಗ, ಆ ವಾಕ್ಯ ಏನು ಹೇಳುತ್ತದೆ ಎಂಬುದು ಕೂಡಲೇ ಗೊತ್ತಾಗಿಬಿಡುತ್ತದೆ. ಆದರೆ, ಒಂದು ವಾಕ್ಯದಲ್ಲಿ ಮುಖ್ಯ ಅಂಶ ಯಾವುದು ಎಂಬುದನ್ನು ಕಂಡುಹಿಡಿಯಬೇಕಿದ್ದಲ್ಲಿ, ಆ ವಾಕ್ಯವನ್ನು ಹೇಗೆ ಕಟ್ಟಲಾಗಿದೆ, ಅದರ ಒಳರಚನೆ ಎಂತಹದು ಎಂಬಂತಹ ವ್ಯಾಕರಣದ ವಿಷಯಗಳನ್ನೂ ಮಕ್ಕಳು ತಿಳಿದುಕೊಳ್ಳಬೇಕಾಗುತ್ತದೆ. ಇದನ್ನವರಿಗೆ ಕುತೂಹಲ ಮೂಡುವ ಹಾಗೆ ಕಲಿಸಬಹುದು. ಉದಾಹರಣೆಗೆ, ಜಾತ್ರೆಯ ನೆನಪು ಬಂದೊಡನೆಯೇ ಆ ತನಕವೂ ನೆನಪಿನ ಮುಂದೆ ಹಾಯದಿದ್ದ ಕೊರತೆಗಳು ತಮ್ಮ ಉಳಿದ ಗೆಳೆಯರನ್ನು ನೋಡುವಾಗ ಹಾಯತೊಡಗುತ್ತವೆ ಎಂಬ ವಾಕ್ಯವನ್ನು ಗಮನಿಸಬಹುದು. ಇದರಲ್ಲಿ ಕೊರತೆಗಳು ನೆನಪಿನ ಮುಂದೆ ಹಾಯತೊಡಗುತ್ತವೆ ಎಂಬುದು ಮುಖ್ಯ ವಾಕ್ಯ; ಹೀಗೆ ಕೊರತೆಗಳು ಹಾಯತೊಡಗುವುದು ಯಾವಾಗ ಎಂಬುದನ್ನು ಜಾತ್ರೆಯ ನೆನಪು ಬಂದೊಡನೆಯೇ ಎಂಬ ತುಂಡುವಾಕ್ಯ, ಮತ್ತು ತಮ್ಮ ಉಳಿದ ಗೆಳೆಯರನ್ನು ನೋಡುವಾಗ ಎಂಬ ಇನ್ನೊಂದು ತುಂಡುವಾಕ್ಯ ಒಟ್ಟಾಗಿ ತಿಳಿಸುತ್ತವೆ; ಇದಲ್ಲದೆ, ಆ ತನಕವೂ ನೆನಪಿನ ಮುಂದೆ ಹಾಯದಿದ್ದ ಕೊರತೆಗಳು ಎಂಬ ಪದಕಂತೆ ಕೊರತೆಗಳು ಎಂತಹವು ಎಂಬುದನ್ನು ತಿಳಿಸುತ್ತದೆ.

ಇಲ್ಲಿ 'ನೆನಪಿನ ಮುಂದೆ' ಮತ್ತು 'ಕೊರತೆಗಳು' ಎಂಬ ಎರಡು ಪದಗಳನ್ನು ಮೊದಲೇ ಬಂದಿರುವ ಪದಕಂತೆಯಲ್ಲಿ ಬಳಸಿರುವ ಕಾರಣ, ಅವನ್ನು ಇನ್ನೊಮ್ಮೆ ಬಳಸಲು ಹೋಗದೆ, ವಾಕ್ಯದ ಕೊನೆಯಲ್ಲಿ 'ಹಾಯತೊಡಗುತ್ತವೆ' ಎಂದಷ್ಟೇ ಹೇಳಲಾಗಿದೆ. ಈ ರೀತಿ ಹೇಳದೆ ಬಿಟ್ಟ ಪದಗಳನ್ನು ಊಹಿಸಿಕೊಳ್ಳುವುದು ಹೇಗೆ ಎಂಬುದನ್ನೂ ವಾಕ್ಯದ ಒಳರಚನೆ ಎಂತಹದು ಎಂಬುದನ್ನು ತೋರಿಸಿಕೊಡುವ ಮೂಲಕ ತಿಳಿಸಲು ಬರುತ್ತದೆ. ಇದೇ ರೀತಿಯಲ್ಲಿ, ಬರೆಯುವ ಕೆಲಸಕ್ಕೆ ನೇರವಾಗಿ ಸಂಬಂಧಿಸಿರುವಂತಹ ವ್ಯಾಕರಣದ ವಿಷಯಗಳನ್ನು ಮಕ್ಕಳು ಬರವಣಿಗೆಯನ್ನು ನಡೆಸುವ ಸಮಯದಲ್ಲೇನೇ ಸ್ವಲ್ಪ ಸ್ವಲ್ಪವಾಗಿ ಅವರಿಗೆ ತಿಳಿಸುತ್ತಾ ಹೋದರೆ, ಆ ತಿಳಿವನ್ನು ಬಳಸಿ ಅವರು ತಮ್ಮ ಬರವಣಿಗೆಯ ಮಟ್ಟವನ್ನು ಮೇಲೇರಿಸಿಕೊಳ್ಳಬಲ್ಲರು, ಮತ್ತು ಬರವಣಿಗೆಯಲ್ಲಿ ಮೂಡುವ ತಪ್ಪುಗಳನ್ನು ತಿದ್ದಿಕೊಳ್ಳಬಲ್ಲರು.

ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾಗಿರುವ ವಿಷಯವೇನೆಂದರೆ, ತಪ್ಪಿಲ್ಲದೆ ಬರೆಯುವುದು ಹೇಗೆ ಎಂಬುದನ್ನು ಕಲಿಸಿದರಷ್ಟೇ ಮಕ್ಕಳಿಗೆ ಹಾಗೆ ಬರೆಯಲು ಬಂದೀತು. ಇದಕ್ಕೆ ಬದಲು, ತಪ್ಪಿಲ್ಲದ ಬರಹಗಳಲ್ಲಿ ಎಂತಹ ವ್ಯಾಕರಣದ ನಿಯಮಗಳು ಬರುತ್ತವೆ ಎಂಬುದನ್ನು ಕಲಿಸಿದರೆ, ಅಂತಹ ನಿಯಮಗಳ ತಿಳಿವು ಬಂದೀತಲ್ಲದೆ, ಆ ನಿಯಮಗಳನ್ನು ವಾಕ್ಯಗಳಲ್ಲಿ ಯಾವಾಗ, ಎಲ್ಲಿ, ಮತ್ತು ಹೇಗೆ ಬಳಸಬೇಕು ಎಂಬುದರ ತಿಳಿವು ಬರಲಾರದು.

ವ್ಯಾಕರಣ ನಿಯಮಗಳ ಕುರಿತಾಗಿರುವ ಇಂತಹ ತಿಳಿವಳಿಕೆ ತರಗತಿಯಲ್ಲಿ ಮುಂದೆ ಇರುವ ಮಕ್ಕಳಿಗಿಂತಲೂ ಹಿಂದೆ ಬೀಳುವ ಮಕ್ಕಳಿಗೆ ಹೆಚ್ಚು ನೆರವಿಗೆ ಬರುತ್ತದೆ ಎಂಬುದಾಗಿ ಸಂಶೋಧನೆಗಳು ತೋರಿಸಿಕೊಟ್ಟಿವೆ. ಉದಾಹರಣೆಗೆ, ಬರಹದಲ್ಲಿ ಬಳಸುವ ವಾಕ್ಯಗಳೆಲ್ಲ ಇಡಿಯಾಗಿರಬೇಕು, ತುಂಡು ವಾಕ್ಯಗಳನ್ನು ಅವುಗಳ ಅಂಗಗಳಾಗಿ (ಒಳವಾಕ್ಯಗಳಾಗಿ) ಮಾತ್ರ ಬಳಸಬೇಕು ಎಂದು ಹೇಳಿಕೊಟ್ಟಾಗ, ತರಗತಿಯಲ್ಲಿ ಮುಂದೆ ಇರುವ ಮಕ್ಕಳಿಗೆ ತಾವೇನು ಮಾಡಬೇಕು ಎಂಬುದು ಒಡನೆಯೇ ಗೊತ್ತಾಗುತ್ತದೆ; ಆದರೆ, ತರಗತಿಯಲ್ಲಿ ಹಿಂದೆ ಇರುವ ಮಕ್ಕಳಿಗೆ ಅದು ಗೊತ್ತಾಗುವುದಿಲ್ಲ.

ಅವರಿಗದು ಗೊತ್ತಾಗುವ ಹಾಗೆ ಮಾಡಲು, ತುಂಡು ವಾಕ್ಯಗಳಿಗೂ ಇಡೀ ವಾಕ್ಯಗಳಿಗೂ ನಡುವೆ ಎಂತಹ ವ್ಯತ್ಯಾಸ ಇದೆ ಎಂಬುದನ್ನು ತೋರಿಸಿಕೊಡಬೇಕು, ಮತ್ತು ತುಂಡು ವಾಕ್ಯಗಳನ್ನು ಇಡೀ ವಾಕ್ಯಗಳ ಒಳವಾಕ್ಯಗಳನ್ನಾಗಿ ಮಾಡಿ ಬಳಸುವುದು ಹೇಗೆ ಎಂಬುದನ್ನು ಉದಾಹರಣೆಗಳನ್ನು ಕೊಟ್ಟು ವಿವರಿಸಬೇಕು. ವ್ಯಾಕರಣದ ತಿಳಿವನ್ನು ಈ ರೀತಿ ಓದು–ಬರಹಗಳಿಗೆ ನೇರವಾಗಿ ಸಂಬಂಧಿಸುವಂತೆ ಕಲಿಸುವುದು ಹೇಗೆ ಎಂಬುದನ್ನು ಕಲಿಸುವವರು ತಿಳಿದಿರಬೇಕು. ವಾಕ್ಯಗಳನ್ನು ಜೋಡಿಸಿ ಇಲ್ಲವೇ ಅವುಗಳೊಳಗೆ ಬೇರೆ ಪದ, ಪದಕಂತೆ ಇಲ್ಲವೇ ಒಳವಾಕ್ಯಗಳನ್ನು ಇರಿಸಿ ಅವನ್ನು ಹಿಗ್ಗಿಸುವುದು ಹೇಗೆ ಎಂಬುದನ್ನು ತಿಳಿಸಿಕೊಡುವಾಗ, ಮಕ್ಕಳಿಗೆ ಹಲವು ಬಗೆಯ ವ್ಯಾಕರಣ ನಿಯಮಗಳ ತಿಳಿವನ್ನು ಒದಗಿಸಲು ಬರುತ್ತದೆ. ಇದೇ ರೀತಿಯಲ್ಲಿ, ಒಳ್ಳೊಳ್ಳೆಯ ಬರಹಗಳಲ್ಲಿ ಬಳಕೆಯಾಗುವ ವಾಕ್ಯಗಳನ್ನು ಬಿಡಿಸಿ ತೋರಿಸಿ, ಅಂತಹವೇ ವಾಕ್ಯಗಳನ್ನು ಬರೆಯಲು ಕಲಿಸುವಾಗಲೂ ಅವನ್ನು ಕಟ್ಟುವಲ್ಲಿ ಬಳಸಬೇಕಾಗುವ ವ್ಯಾಕರಣದ ನಿಯಮಗಳನ್ನು ತಿಳಿಸಲು ಬರುತ್ತದೆ.

ಮಕ್ಕಳಿಗೆ ಈ ರೀತಿ ಅವರ ಓದಿಗೆ ಮತ್ತು ಬರವಣಿಗೆಗೆ ನೆರವಾಗುವ ಹಾಗೆ ಕನ್ನಡದ್ದೇ ಆದ ವ್ಯಾಕರಣದ ನಿಯಮಗಳನ್ನು ಕಲಿಸಿದಲ್ಲಿ, ಇವತ್ತಿನ ಹಾಗೆ ವ್ಯಾಕರಣ ಎಂದರೆ ಬಾಯಿಪಾಠ ಮಾಡಿ ಪರೀಕ್ಷೆಯಲ್ಲಿ ಮಾರ್ಕು ಪಡೆಯಲು ನೆರವಾಗುವಂತಹದು ಮಾತ್ರ ಎಂಬ ತಪ್ಪು ತಿಳಿವು ಹೋಗಬಲ್ಲುದು.

ಪ್ರತಿಕ್ರಿಯಿಸಿ: **feedback@sudha.co.in**

